**ದಿನಾಂಕ : *23-01-2026* ರಂದು ಸಾಕ್ಷಿಗೆ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**
**ಪಾಟೀ ಸವಾಲು : *3* ನೇ ಎದುರುದಾರರ ಪರವಾಗಿ ಶ್ರೀ. ಆರ್ ಕೆ ಬಿ ವಕೀಲರಿಂದ**

ಜಗದೀಶ ರವರಿಗೆ ಮದುವೆ ಆಗಿರಲಿಲ್ಲ. ಜಗದೀಶ ರವರಿಗೆ ನಾನು ಮತ್ತು 1 ನೇ ಅರ್ಜಿದಾರರು ವಾರಸುದಾರರುಎಂದು ತೋರಿಸಲು ತಹಶೀಲ್ದಾರ ರವರು ನೀಡಿದ ಪ್ರಮಾಣ ಪತ್ರವನ್ನು ಹಾಜರು ಪಡಿಸಿರುತ್ತೇನೆ. ವಾರಸಾ ಪ್ರಮಾಣ ಪತ್ರವನ್ನು ಹಾಜರು ಪಡಿಸಿರುವುದಿಲ್ಲ ಎಂದರೆ ಸರಿಯಲ್ಲ. ಅಪಘಾತವಾದ ದಿನ ಶಶಿಕಾಂತ ಪೋಲಿಸಪಾಟೀಲರವರು ವಾಹನವನ್ನು ಚಲಾಯಿಸುತ್ತಿದ್ದರು. ಶಶಿಕಾಂತ ಪೋಲಿಸಪಾಟೀಲರವರ ಚಾಲನಾ ಪರವಾನಿಗೆ ಪತ್ರವನ್ನು ಹಾಜರು ಪಡಿಸಿರುತ್ತೇನೆ. ಶಶಿಕಾಂತ ಪೋಲಿಸಪಾಟೀಲರವರಿಗೆ ಚಾಲನಾ ಪರವಾನಿಗೆ ಪತ್ರ ಇರಲಿಲ್ಲ ಎಂದರೆ ಸರಿಯಲ್ಲ. ಶಶಿಕಾಂತ ಪೋಲಿಸಪಾಟೀಲರವರಿಗೆ ಚಾಲನಾ ಪರವಾನಿಗೆ ಪತ್ರ ಇತ್ತು ಎಂದು ಮತ್ತು ಅದನ್ನು ಹಾಜರು ಪಡಿಸಿರುತ್ತೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಹಾಜರು ಪಡಿಸಿರುವ ದಾಖಲೆಗಳ ಬಗ್ಗೆ ತಿಳಿದಿರುತ್ತದೆ. ಪೋಲಿಸರು ಸಲ್ಲಿಸಿದ ಅಂತಿಮ ವರದಿಯಲ್ಲಿ ಶಶಿಕಾಂತ ಪೋಲಿಸಪಾಟೀಲರವರಿಗೆ ಡಿ ಎಲ್ ಇರುವುದಿಲ್ಲ ಎಂದು ನಮೂದಿಸಿರುತ್ತಾರೆ ಎಂದರೆ ಸರಿ. ಅಂತಿಮ ವರದಿಯಲ್ಲಿ ಜಗದೀಶ, ಶಶಿಕಾಂತ ಪೋಲಿಸಪಾಟೀಲರವರ ಬಗ್ಗೆ ಮತ್ತು ಅಪಘಾತದ ಬಗ್ಗೆ ನಮೂದಿಸಿರುವ ಸಂಗತಿಗಳು ಸತ್ಯದಿಂದ ಕೂಡಿರುತ್ತವೆ ಎಂದರೆ ಸರಿ. ಶಶಿಕಾಂತ ಪೋಲಿಸಪಾಟೀಲರವರಿಗೆ ಡಿ ಎಲ್ ಇರದೇ ಇರುವುದರಿಂದ 3 ನೇ ಎದುರುದಾರರು ಪರಿಹಾರದ ಹಣವನ್ನು ಕೊಡಲು ಭಾದ್ಯಸ್ತರಲ್ಲ ಎಂದರೆ ಸರಿಯಲ್ಲ.

ಹೊಸಪೇಟೆಯಿಂದ ಜಗದೀಶ ರವರ ಬಾಡಿಯನ್ನು ತರಲು 25 ಸಾವಿರ ರೂ.ಗಳು ಖರ್ಚು ಆಗಿರುತ್ತದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಜಗದೀಶ ರವರು ಜೀವಂತ ಇದ್ದಾಗ ತಿಂಗಳಿಗೆ 20 ಸಾವಿರ ರೂ.ಗಳನ್ನು ದುಡಿಯುತ್ತಿದ್ದರು ಎಂದು ಸುಳ್ಳು ಹೇಳುತ್ತಿದ್ದೇನೆ ಸರಿಯಲ್ಲ. ಈ ಕುರಿತು ಯಾವುದೇ ದಾಖಲೆಗಳನ್ನು ಹಾಜರು ಪಡಿಸಿರುವುದಿಲ್ಲ. ಪರಿಹಾರದ ಹಣವನ್ನು ಪಡೆಯುವುದಕ್ಕೊಸ್ಕರ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲು :** 2 ನೇ ಎದುರುದಾರರ ತಮ್ಮ ತಕರಾರನ್ನು ಸಲ್ಲಿಸದೇ ಇರುವುದರಿಂದ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.
ಮರು ವಿಚಾರಣೆ ಇಲ್ಲ.

( ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಿದೆ )

ಓ. ಹೇ. ಕೇ. ಸರಿ ಅದೆ.

ಹಿರಿಯ ದಿವಾಣಿ ನ್ಯಾಯಾಧೀಶರು,
ಹಾಗೂ ಜೆ.ಎಮ್.ಎಫ್.ಸಿ, ಹುನಗುಂದ.